


## ವೈರಸ್‌ಗಳ ವಿಚಿತ್ರ ಜಗತ್ತು

ಮಾರ್ಚ್ 26ರ ಸಂಚಿಕೆಯಲ್ಲಿ ಡಾ. ಚೈತ್ರಾ ಕೆ.ಎಸ್. ಅವರು ಬರೆದ ಮುಖಪುಟ ಲೇಖನ 'ಮುಸುಕು ತೆಗೆಯೋ ಮಾಯಾವಿ; ವೈರಸ್‌ಗಳ ವಿಚಿತ್ರ ಜಗತ್ತು' ಸ್ವಾರಸ್ಯಕರ ಹಾಗೂ ಸಾಕಷ್ಟು ಮಾಹಿತಿಗಳಿಂದ ಕೂಡಿದೆ.

ಕೊರೊನಾ ವೈರಸ್ಸಿನ ಹುಟ್ಟಿನ ಹಿನ್ನೆಲೆ, ಅದರ ಹರಡುವಿಕೆ, ಮುಖ್ಯ ಲಕ್ಷಣ, ಅದನ್ನು ತಡೆಗಟ್ಟುವಲ್ಲಿ ನಾವು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಲೇಖನ ಬೆಳಕು ಚೆಲ್ಲಿದೆ. ಡಾ. ರವೀಂದ್ರನಾಥ್ ಅವರು ಬರೆದ 'ಈ ಯುಗದ ವಿಷಕನ್ಯೆಯ ಹೆಸರು ಕೊರೊನಾ' ಬರಹ ಕೂಡಾ ಗಮನಸೆಳೆಯಿತು. ಈ ಲೇಖನ ಕೊರೊನಾ ಬಗ್ಗೆ ಇದ್ದ ಹಲವು ಊಹಾಪೋಹಗಳಿಗೆ, ಸಂದೇಹಗಳಿಗೆ ಸೂಕ್ತವಾದ ಉತ್ತರ ಒದಗಿಸಿತು. ತುಂಬ ಮೌಲಿಕವಾದ ಲೇಖನಗಳಿವು.

— ಕೆ.ಪಿ.ರಾಮಗುಂಡಿ. ಬೈಲಹೊಂಗಲ

## ಮಿಥ್ಯಾ ಜಲ

ಮಾರ್ಚ್ 26ರ ಸಂಚಿಕೆಯ ಪ್ರಶ್ನಾಂಕಣದಲ್ಲಿ ಎನ್. ವಾಸುದೇವ್ ಅವರು ಬರೆದ 'ಮಿಥ್ಯಾ ಜನ ಎಂದರೇನು?' ಬರಹ ಉಪಯುಕ್ತ ಮಾಹಿತಿ ನೀಡಿದೆ. ಇದು ನಾಡಿನ ಎಲ್ಲರಿಗೂ ತಲುಪಬೇಕಾದ ಉತ್ಕೃಷ್ಟ ಮಾಹಿತಿಯಾಗಿದೆ. ಇಂಥ ಬರಹಗಳು 'ಸುಧಾ'ದಲ್ಲಿ ಹೆಚ್ಚು ಹೆಚ್ಚು ಪ್ರಕಟಗೊಳ್ಳಲಿ.

— ನಾ.ಸು. ನಾಗರಾಜ್, ಬೆಂಗಳೂರು



## ಸುಕ್ರಜ್ಜಿಗೆ ಗೌರವ ಕೊಡಿ

ಏಪ್ರಿಲ್ 2 ರ ಸಂಚಿಕೆಯಲ್ಲಿ 'ಸುಕ್ರಜ್ಜಿ ಜೊತೆಗೊಂದು ಸಾಯಂಕಾಲ' , ಪ್ರಸಾದ್ ಶೆಣೈ ಆರ್.ಕೆ. ಬರೆದ ಸಂಸ್ಕೃತಿ ಕುರಿತ ಲೇಖನ ಶೀರ್ಷಿಕೆಯ 'ಹಾಲಕ್ಕಿ ಹಾಡಿಗೆ ಹಗಲಲ್ಲೇ ಬೆಳದಿಂಗಳು' ಬಹಳ ಕುತೂಹಲಕಾರಿಯಾಗಿದೆ. ಸುಕ್ರಜ್ಜಿ ಭೇಟಿಯ ಅನುಭವದ ಕಥನ ಏಲಕ್ಕಿಯಷ್ಟೇ ಘಮದಿಂದ ಕೂಡಿತ್ತು! 'ಹಾಲಕ್ಕಿ ಜನರೆಲ್ಲಾ ಚಪ್ಪಲಿ ಇಲ್ಲದೇ ದೂರದೂರಿಗೆ ಓಡಾಡುತ್ತಾರೆ, ನಾನೆಂತಕೆ ಕಾರಲ್ಲಿ ಹೋಗಲಿ, ನಾನು ಹೀಗೇ ಇದ್ದು ಬಿಡುವೆ" ಹಿರಿಯಜ್ಜಿಯ ಮಾತು ಮಾರ್ಮಿಕವಾಗಿದೆ.

ಅಂಕೋಲೆ– ಹುಬ್ಬಳ್ಳಿ ರೈಲು ಮಾರ್ಗಕ್ಕೆ ಸರ್ಕಾರದ ಹಸಿರು ನಿಶಾನೆಯ ಈ ಹೊತ್ತಲ್ಲಿ ಸಾವಿರಾರು ಮರಗಳ ಮಾರಣ ಹೋಮದ ಸನ್ನಿವೇಶದ ಘಟ್ಟದಲ್ಲಿ, 'ಹೂ ಕಿತ್ತು ಬಿಸಾಡೋದು ಒಂದೇ, ಶೀಲ ಕೆಡಿಸೋದೂ ಒಂದೇ…' ಅವರ ಸಾಲುಗಳು ಅಭಿವೃದ್ಧಿ ನೆಪದಲ್ಲಿ ಅಂಕೋಲೆಯ ಪರಿಸರದ ಪ್ರಕೃತಿಯ ಒಡಲ ಗರ್ಭದ ಭ್ರೂಣಹತ್ಯೆ ಮಾಡುವುದು ಸರ್ವತಾ ಸಲ್ಲ. ತನ್ನ ಮನೆಯ ಜಾಗ ಹೋದರೂ ಹೋರಾಡದ ಸುಕ್ರಜ್ಜಿ, ಪರಿಸರ ಯೋಜನೆಯಿಂದ ನಿರಾಶ್ರಿತರ ಜಾಗ ಹೋದಾಗ ಹೋರಾಡಿದ್ದು ಓದಿ ಅಜ್ಜಿಯು ತುಂಬಾ ಎತ್ತರಕ್ಕೆ ನಿಲ್ಲುತ್ತಾರೆ ಅನ್ನಿಸಿತ್ತು. ಸರ್ಕಾರವು ಪರಿಸರ ಮಾರಕ ಯೋಜನೆ ಕೈಬಿಟ್ಟಲ್ಲಿ ಖಂಡಿತಾ ಅದುವೇ ಸುಕ್ರಜ್ಜಿಗೆ ಸಲ್ಲುವ ಅತ್ಯುನ್ನತ ಪ್ರಶಸ್ತಿ. ಲೇಖಕರ ಭೇಟಿಯ ಕಥನ ಸಾಮಾಜಿಕ ಕಳಕಳಿಯಿಂದ ತುಂಬಾ ಚೆನ್ನಾಗಿ ಮೂಡಿದೆ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಔಷಧೀಯ ದಾಳಿಂಬೆ

ಮಾರ್ಚ್ 26 ಸಂಚಿಕೆಯಲ್ಲಿ ಪ್ರಕಟವಾದ ಹರ್ಷಿತಾ ಹರೀಶ್ ಕುಲಾಲ 'ದಾಳಿಂಬೆ ಗುಣಗಳ ಔಷಧಿ' ಬಗ್ಗೆ ಬರೆದಿರುವ ಲೇಖನ ಉಪಯುಕ್ತ ಮಾಹಿತಿ ನೀಡಿದೆ. ದಾಳಿಂಬೆ ಎಲ್ಲ ಕಡೆಯೂ ಸಿಗುತ್ತದೆ. ಆದರೆ ಇದರ ಆಯುರ್ವೇದೀಯ ಮಹತ್ವ ಎಲ್ಲರಿಗೂ ತಿಳಿದಿರುವುದಿಲ್ಲ. ಲೇಖನದಲ್ಲಿ ಹಲವು ಮಾಹಿತಿಗಳಿದ್ದು, ಎಲ್ಲರಿಗೂ ಪ್ರಯೋಜನಕಾರಿಯಾಗಿದೆ.

– ಬಸಪ್ಪ ಎಸ್ ಮುಳ್ಳೂರ, ಹಲಗತ್ತಿ

## ಚಿಂತನಶೀಲ ಬರಹ

ಮಾರ್ಚ್ 26ರ ಸಂಚಿಕೆಯ 'ನಿಮ್ಮೊಡನೆ' ಯಲ್ಲಿ ಪ್ರಕಟಗೊಂಡ ರಘುನಾಥ್ ಚ.ಹ. ಅವರ ಲೇಖನ 'ಸಾಮಾಜಿಕ ವೈರಸ್ ಗೆ ಮದ್ದು ದೊರೆಯುವುದು ಯಾವಾಗ?' ಬರಹ ಚಿಂತನಶೀಲ ಮತ್ತು ಸಾಮಾಜಿಕ ಕಳಕಳಿಯಿಂದ ಕೂಡಿದೆ. ಮಾರಣಾಂತಿಕ ವೈರಾಣುಗಳು ಒಂದಿಲ್ಲೊಂದು ದಿನ ಮನುಷ್ಯನ ದೇಹಕ್ಕೆ ಹೊಂದಿಕೊಂಡು ನಿರಪಾಯವಾಗಿ ಹೋಗಬಹುದು. ಆದರೆ ಜಾತೀಯತೆ ವೈರಾಣುವಿಗೆ ಈವರೆಗೂ ಲಸಿಕೆಯನ್ನು ಕಂಡುಕೊಳ್ಳಲಾಗಿಲ್ಲ. ಶತಮಾನಗಳಿಂದ ಈ ವೈರಸ್ ಅಪಾಯಕಾರಿಯಾಗಿ ಮುಂದುವರೆದಿದೆ. ಕೊರೊನಾ ವೈರಾಣು ಎಲ್ಲೆಡೆ ಹರಡುತ್ತಿರುವ ಸಂದರ್ಭದಲ್ಲಿ ಸಾಮಾಜಿಕ ವೈರಸ್ಸಿನ ಕುರಿತು ಸ್ವಲ್ಪವಾದರೂ ಚಿಂತಿಸುವಂತೆ ಮಾಡಿದ್ದು ಲೇಖನದ ಮುಖ್ಯ ಆಶಯ. ಈ ಕುರಿತು ಕ್ರಮ ಕೈಗೊಳ್ಳಬೇಕು ಎಂಬ ಲೇಖಕರ ಸದಾಶಯವನ್ನು ನಾವು ಮೆಚ್ಚಲೇಬೇಕು.

—ಕೆ.ಪಿ. ಆರ್.

## ಮಹಾತ್ಮ ಅನ್ವರ್ಥಕ

ರಾಷ್ಟ್ರಪಿತ ಮತ್ತು ಮಗ ಹರಿಲಾಲನ ಬಗೆಗಿನ ಜೀವನ ಕಥನ ನಾನೋದಿದ ಅತ್ಯುತ್ತಮ ಧಾರಾವಾಹಿಗಳಲ್ಲೊಂದು.

ದಿನಕರ ಜೋಶಿ ಡಿ. ಎನ್. ಶ್ರೀನಾಥ್ ನಿಜಕ್ಕೂ ಅಭಿನಂದನಾರ್ಹರು.

—ನಾ.ಸು. ನಾಗರಾಜ್, ಬೆಂಗಳೂರು



## ನ್ಯೂಟನ್ ಮತ್ತು ಕನ್ನಡ

ನ್ಯೂಟನ್ ಮನೆಯಲ್ಲಿ ಕನ್ನಡ ಪುಸ್ತಕ ಓದಿ ಸಂತೋಷವಾಯಿತು. ಕನ್ನಡಿಗ ಲೇಖಕರ ಕನ್ನಡ ಪುಸ್ತಕವೊಂದು ನ್ಯೂಟನ್ ಮನೆಯಲ್ಲಿ ಸ್ಥಾನ ಪಡೆದದ್ದು ಕನ್ನಡಿಗರಿಗೆ ಅಭಿಮಾನದ ವಿಷಯ.

ಕುತೂಹಲದಿಂದ ಗೂಗಲ್ ಮ್ಯಾಪ್‌ನಲ್ಲಿ ನ್ಯೂಟನ್ ಮನೆ ನೋಡಿಯೇ ಬಂದೆ.

ಸಿಬ್ಬಮ ನದಿಯ ಜೊತೆ ಲೇಖಕರು ತೆಗೆಸಿಕೊಂಡ ಸ್ಥಳವನ್ನೂ ಝೂಮ್ ಮಾಡಿ ನೋಡಿ ಖುಷಿಯಾಯಿತು.

—ವಿರೇಶ್ ಬಂಗಾರಶೆಟ್ಟರ್

## ಸೊಗಸಾದ ಸಂದರ್ಶನ

ಏಪ್ರಿಲ್ 2ರ ಸಂಚಿಕೆಯಲ್ಲಿ ಪ್ರಕಟವಾದ ವ್ಯಂಗ್ಯಚಿತ್ರಕಾರ ಸುಬ್ರಮಣ್ಯ ಅವರ ಸಂದರ್ಶನ ತುಂಬಾ ಸೊಗಸಾಗಿ ಮೂಡಿಬಂದಿದೆ. ಈ ಹಿರಿಯ ವ್ಯಂಗ್ಯಚಿತ್ರಕಾರ ಇಂದಿನ ಪೀಳಿಗೆಗೆ ಮಾದರಿ. ಅವರಿಂದ ಈ ಕ್ಷೇತ್ರಕ್ಕೆ ಇನ್ನಷ್ಟು ಕೊಡುಗೆ ಮುಂದಿನ ದಿನಗಳಲ್ಲಿ ನಿರೀಕ್ಷಿಸುತ್ತೇವೆ.

—ಎಚ್.ಎಸ್. ವಿಶ್ವನಾಥ್